**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎ.ಸಿ.ಜೆ.ಎಮ್.ನ್ಯಾಯಾಲಯ, ಉಡುಪಿ.**

**ಸಿ.ಸಿ. ನಂ. 448/2022**

ಪಡುಬಿದ್ರಿ ಪೋಲೀಸ್ ಠಾಣೆ ..... ಪಿರ್ಯಾದಿದಾರರು

ಮತ್ತು

1. ಪೃಥ್ವಿ,
ಪ್ರಾಯಃ 26 ವರ್ಷ,
ತಂದೆಃ ಹರೀಶ್,
ವಾಸಃ ಮನೆ ನಂ. 1-6-182,
ಪೃಥ್ವಿ ಪ್ರತಿಭಾ ನಿವಾಸ,
ವಾಟರ್ ಟ್ಯಾಂಕ್ ಹತ್ತಿರ,
ಕಂಚಿನಡ್ಕ, ಪಡುಬಿದ್ರಿ ಅಂಚೆ,
ನಡಾಲು ಗ್ರಾಮ, ಕಾಪು ತಾಲೂಕು,
ಉಡುಪಿ.

2. ಗಣೇಶ,
ಪ್ರಾಯಃ 45 ವರ್ಷ,
ತಂದೆಃ ದಿ. ಪರದೇಶಿ,
ವಾಸಃ ಮನೆ ನಂ. 1-6-182,
ಸೀಗೆ ನಿವಾಸ, ವಾಟರ್ ಟ್ಯಾಂಕ್ ಹತ್ತಿರ,
ಕಂಚಿನಡ್ಕ, ಪಡುಬಿದ್ರಿ ಅಂಚೆ,
ನಡಾಲು ಗ್ರಾಮ, ಕಾಪು ತಾಲೂಕು,
ಉಡುಪಿ.

3. ರಮೇಶ,
ಪ್ರಾಯಃ 43 ವರ್ಷ,
ತಂದೆಃ ದಿ. ಪರದೇಶಿ,
ವಾಸಃ ಮನೆ ನಂ. 1-6-182(ಎ),
ಸೀಗೆ ನಿವಾಸ, ವಾಟರ್ ಟ್ಯಾಂಕ್ ಹತ್ತಿರ,
ಕಂಚಿನಡ್ಕ, ಪಡುಬಿದ್ರಿ ಅಂಚೆ,
ನಡಾಲು ಗ್ರಾಮ, ಕಾಪು ತಾಲೂಕು,
ಉಡುಪಿ.

4. ದೀಕ್ಷಿತ್ ಅಲಿಯಾಸ್ ಜಿತೇಶ,
ಪ್ರಾಯಃ 30 ವರ್ಷ,
ತಂದೆಃ ರಾಘು ಮುಖಾರಿ,
ವಾಸಃ ಮನೆ ನಂ. 1-6-20-4,
ವಾಟರ್ ಟ್ಯಾಂಕ್ ಹತ್ತಿರ,
ಕಂಚಿನಡ್ಕ, ಪಡುಬಿದ್ರಿ ಅಂಚೆ,
ನಡಾಲು ಗ್ರಾಮ, ಕಾಪು ತಾಲೂಕು,
ಉಡುಪಿ.

5. ಅನೀಶ್,
ಪ್ರಾಯಃ 21 ವರ್ಷ,
ತಂದೆಃ ರಮೇಶ,
ವಾಸಃ ಮನೆ ನಂ. 1-6-182 (ಎ),
ಸೀಗೆ ನಿವಾಸ, ವಾಟರ್ ಟ್ಯಾಂಕ್ ಹತ್ತಿರ,
ಕಂಚಿನಡ್ಕ, ಪಡುಬಿದ್ರಿ ಅಂಚೆ,
ನಡಾಲು ಗ್ರಾಮ, ಕಾಪು ತಾಲೂಕು,
ಉಡುಪಿ. …… ಆರೋಪಿತರು

## ದೋಷಾರೋಪಣೆ

ಪಿ.ಆರ್. ಯೋಗೇಶ್, ಬಿ.ಕಾಂ. ಎಲ್.ಎಲ್.ಬಿ., ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ, ಆದ ನಾನು ಮೇಲ್ಕಾಣಿಸಿದ ಆರೋಪಿತರಾದ ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆಃ

ದಿನಾಂಕ 04.09.2021 ರಂದು ರಾತ್ರಿ 9.20 ರ ಸಮಯದಲ್ಲಿ ಕಾಪು ತಾಲೂಕು ನಡ್ಸಾಲು ಗ್ರಾಮದ ಕಂಚಿನಡ್ಕ ಮಿಂಚಿನ ಬಾವಿ ಎಂಬಲ್ಲಿರುವ ಶಶಿಕಲಾ ಎನ್ನುವವರ ಅಂಗಡಿಯ ಬಳಿ ಚಾಸಾ.1 ರವರು ಸ್ಕೂಟಿಯನ್ನು ನಿಲ್ಲಿಸಿಕೊಂಡು ಮಾತನಾಡುತ್ತಿರುವಾಗ ಅಲ್ಲಿಗೆ ಬಂದ 1 ನೇ ಆರೋಪಿಯವರಾದ ನೀವು ಕರೆ ಮಾಡಿದ ಮೇರೆಗೆ 2 ರಿಂದ 5 ನೇ ಆರೋಪಿತರಾದ ನೀವು ಅಲ್ಲಿಗೆ ಬಂದು ಏಕೋದ್ದೇಶವನ್ನು ಹೊಂದಿದವರಾಗಿ ಅಕ್ರಮ ಕೂಟವನ್ನು ಕಟ್ಟಿಕೊಂಡಿರುವ ಮೂಲಕ ಭಾರತ ದಂಡ ಸಂಹಿತೆಯ ಕಲಂ 143 ಸಹ ಕಲಂ 149 ರ ರೀತಿಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಅದೇ ದಿನ, ಸಮಯ, ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿತರಾದ ನೀವು ಏಕೋದ್ದೇಶವನ್ನು ಹೊಂದಿದವರಾಗಿ ದೊಂಬಿ ಗಲಾಟೆಯನ್ನು ಮಾಡಿರುವ ಮೂಲಕ ಭಾರತ

ದಂಡ ಸಂಹಿತೆಯ ಕಲಂ 147 ಸಹ ಕಲಂ 149 ರ ರೀತಿಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಅದೇ ದಿನ, ಸಮಯ, ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿತರಾದ ನೀವು ಏಕೋದ್ದೇಶವನ್ನು ಹೊಂದಿದವರಾಗಿ ಮಾರಕ ವಸ್ತುವಾದ ಕಬ್ಬಿಣದ ರಾಡ್ ನ್ನು 2 ರಿಂದ 4 ನೇ ಆರೋಪಿತರಾದ ನೀವು ಹಿಡಿದುಕೊಂಡು ದೊಂಬಿ ಗಲಾಟೆಯನ್ನು ಮಾಡಿರುವ ಮೂಲಕ ಭಾರತ ದಂಡ ಸಂಹಿತೆಯ ಕಲಂ 148 ಸಹ ಕಲಂ 149 ರ ರೀತಿಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಅದೇ ದಿನ, ಸಮಯ, ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿತರಾದ ನೀವು ಏಕೋದ್ದೇಶವನ್ನು ಹೊಂದಿದವರಾಗಿ ಚಾಸಾ.1 ರವರಿಗೆ ಬೇವರ್ಸಿ ನಿನ್ನನ್ನು ಬಿಡುವುದಿಲ್ಲ ಎಂದು ಅವಾಚ್ಯ ಶಬ್ದದಿಂದ ನಿಂದಿಸಿರುವ ಮೂಲಕ ಭಾರತ ದಂಡ ಸಂಹಿತೆಯ ಕಲಂ 504 ಸಹ ಕಲಂ 149 ರ ರೀತಿಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಅದೇ ದಿನ, ಸಮಯ, ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿತರಾದ ನೀವು ಏಕೋದ್ದೇಶವನ್ನು ಹೊಂದಿದವರಾಗಿ 5 ನೇ ಆರೋಪಿಯವರಾದ ನೀವು ಬಾಲಾಪರಾಧಿಯೊಂದಿಗೆ ಸೇರಿ ಚಾಸಾ.1 ರವರನ್ನು ಹಿಡಿದು ಎಳೆದಾಡಿ ಅವರ ಎಡಕೈ ಮತ್ತು ಬಲತೋಳಿಗೆ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುವ ಮೂಲಕ ಭಾರತ ದಂಡ ಸಂಹಿತೆಯ ಕಲಂ 323 ಸಹ ಕಲಂ 149 ರ ರೀತಿಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಅದೇ ದಿನ, ಸಮಯ, ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿತರಾದ ನೀವು ಏಕೋದ್ದೇಶವನ್ನು ಹೊಂದಿದವರಾಗಿ 5 ನೇ ಆರೋಪಿಯವರು ಚಾಸಾ.1 ರವರನ್ನು ಹಿಡಿದು ಎಳೆದಾಡುವಾಗ 2 ರಿಂದ 4 ನೇ ಆರೋಪಿತರಾದ ನೀವು ಕಬ್ಬಿಣದ ರಾಡ್ ನಿಂದ ಬಲಗಾಲು ಮತ್ತು ಬಲಕೈ ಮಣಿಗಟ್ಟಿಗೆ ಹೊಡೆದು ತೀವ್ರ ಸ್ವರೂಪದ ಗಾಯಗಳನ್ನುಂಟು ಮಾಡಿರುವ ಮೂಲಕ ಭಾರತ ದಂಡ ಸಂಹಿತೆಯ ಕಲಂ 326 ಸಹ ಕಲಂ 149 ರ ರೀತಿಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಅದೇ ದಿನ, ಸಮಯ, ಸ್ಥಳ ಮತ್ತು ಸಂದರ್ಭದಲ್ಲಿ ಆರೋಪಿತರಾದ ನೀವು ಏಕೋದ್ದೇಶವನ್ನು ಹೊಂದಿದವರಾಗಿ ಚಾಸಾ.1 ರವರಿಗೆ ನಿನ್ನನ್ನು ಜೀವಸಹಿತ ಬಿಡುವುದಿಲ್ಲವೆಂದು ಜೀವಬೆದರಿಕೆಯನ್ನು ಹಾಕಿರುವ ಮೂಲಕ ಭಾರತ ದಂಡ ಸಂಹಿತೆಯ ಕಲಂ 506 ಸಹ ಕಲಂ 149 ರ ರೀತಿಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಮೇಲಿನ ದೋಷಾರೋಪಣೆಯನ್ನು ಆರೋಪಿಯವರಿಗೆ ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಿ ಹೇಳಿದ್ದು ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಲಾಗಿದೆ.

ದಿನಾಂಕ 15 ನೇ ದಿನ ಜುಲೈ ತಿಂಗಳು, 2023.

(ಪಿ.ಆರ್. ಯೋಗೇಶ್)
ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಎಸಿಜೆಎಂ, ಉಡುಪಿ.

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎ.ಸಿ.ಜೆ.ಎಮ್.ನ್ಯಾಯಾಲಯ, ಉಡುಪಿ.**

**ಸಿ.ಸಿ. ನಂ. 448/2022**

ಪಡುಬಿದ್ರಿ ಪೋಲೀಸ್ ಠಾಣೆ ..... ಪಿರ್ಯಾದಿದಾರರು

ಮತ್ತು

5. ಅನೀಶ್,
ಪ್ರಾಯಃ 21 ವರ್ಷ,
ತಂದೆಃ ರಮೇಶ,
ವಾಸಃ ಮನೆ ನಂ. 1-6-182 (ಎ),
ಸೀಗೆ ನಿವಾಸ, ವಾಟರ್ ಟ್ಯಾಂಕ್ ಹತ್ತಿರ,
ಕಂಚಿನಡ್ಕ, ಪಡುಬಿದ್ರಿ ಅಂಚೆ,
ನಡಾಲು ಗ್ರಾಮ, ಕಾಪು ತಾಲೂಕು,
ಉಡುಪಿ. ...... ಆರೋಪಿ

<u>ದೋಷಾರೋಪಣೆ</u>

ಪ್ರಶ್ನೆ 1ಃ ಈಗ ನಿಮಗೆ ಓದಿ ವಿವರಿಸಿದ ದೋಷಾರೋಪಣೆಯು ತಿಳಿಯಿತೇ?

ಉತ್ತರಃ

ಪ್ರಶ್ನೆ 2 ಃ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೇ?

ಉತ್ತರ ಃ

ಮೇಲಿನ ದೋಷಾರೋಪಣೆಯನ್ನು ಆರೋಪಿಯವರಿಗೆ ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಿ ಹೇಳಿದ್ದು ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಲಾಗಿದೆ.

ದಿನಾಂಕ 15 ನೇ ದಿನ ಜುಲೈ ತಿಂಗಳು, 2023.

(ಪಿ.ಆರ್. ಯೋಗೇಶ್)
ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಎಸಿಜೆಎಂ, ಉಡುಪಿ.